KACD220027672023

Presented on : 28-12-2023
Registered on : 28-12-2023
Decided on : 02-04-2026
Duration : 04D-03M-02Y

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಚಳ್ಳಕೆರೆ.

ಉಪಸ್ಥಿತರುಃ ಶ್ರೀಮತಿ ಹೇಮಾ ಹೆಚ್.ಆರ್.,
ಬಿ.,ಎ. ಎಲ್, ಎಲ್ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

ದಿನಾಂಕ 02 ನೇ ಏಪ್ರಿಲ್ 2026

**ಸಿ.ಸಿ.ನಂ.1350/2023**

ಪಿರ್ಯಾದಿದಾರರುಃ ಸರ್ಕಾರದ ಪರವಾಗಿ ಚಳ್ಳಕೆರೆ ಪೊಲೀಸ್.

(ಸಹಾಯ ಸರ್ಕಾರಿ ಅಭಿಯೋಜಕರು)

–ವಿರುದ್ಧ –

ಆರೋಪಿತರು :–

೧. ಮಹಂತೇಶ ಬಿನ್ ತಿಮ್ಮಪ್ಪ, ಸು.೬೯ ವರ್ಷ.
೨. ಮಧು @ ಮಧುಕುಮಾರ್ ವಿ. ಬಿನ್ ವೇಣುಗೋಪಾಲ್, ಸು.೩೩ ವರ್ಷ.
೩. ಕಲ್ಪನ ಎಸ್. ಬಿನ್ ಮಹಂತೇಶ್, ಸು.೩೦ ವರ್ಷ.
೪. ಉಶ ಕೋಂ ಮಧು @ ಮಧುಕುಮಾರ್, ಸು.೨೭ ವರ್ಷ.
೫. ಲಕ್ಷ್ಮಿ ಕೋಂ ಸಾಲ್ವರಾಜ್, ಸು.೪೯ ವರ್ಷ.

ಆರೋಪಿತರು ನರಹರಿನಗರ, ನಗರಂಗೆರೆ ಅಂಚೆ,
ಚಳ್ಳಕೆರೆ ಪಟ್ಟಣದ ವಾಸಿಗಳು.

(ಆರೋಪಿತರ ಪರ: ಎ.ರಾಮಕೃಷ್ಣ, ವಕೀಲರು)

1. ಅಪರಾಧ ಜರುಗಿದ ದಿನಾಂಕ ಃ 06.10.2023

| | | |
|---|---|---|
| 2. ಅಪರಾಧವನ್ನು ವರದಿ ಮಾಡಿದ ದಿನಾಂಕ | ಃ | 07.10.2023 |
| 3. ಆರೋಪಿತರನ್ನು ಬಂಧಿಸಿದ ದಿನಾಂಕ | ಃ | -- |
| 4. ಪಿರ್ಯಾದುದಾರರ ಹೆಸರು | ಃ | ಯಶೋಧಮ್ಮ |
| 5. ವಿಚಾರಣೆ ಪ್ರಾರಂಭವಾದ ದಿನಾಂಕ | ಃ | 26.03.2026 |
| 6. ವಿಚಾರಣೆ ಮುಕ್ತಾಯವಾದ ದಿನಾಂಕ | ಃ | 26.03.2026 |
| 7. ಆಪಾದನೆಗಳು | ಃ | ಭಾ.ದಂ.ಸಂ.ಕಲಂ 143, 147, 148, 323, 326, 354, 341, 504, 506 ಸಹವಾಚಕ ಕಲಂ 149 |
| 8. ನ್ಯಾಯಾಧೀಶರ ಅಭಿಪ್ರಾಯ | ಃ | ನಿರ್ದೋಷಿ ಎಂದು ಪರಿಗಣಿಸಿದೆ. |

## ತೀರ್ಪು

ಚಳ್ಳಕೆರೆ ಪೊಲೀಸ್ ಠಾಣೆಯ ಉಪನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ ೧೪೩, ೧೪೭, ೧೪೮, ೩೨೩, ೩೨೬, ೩೪೧, ೩೫೪, ೫೦೪, ೫೦೬ ಸಹವಾಚಕ ಕಲಂ ೧೪೯ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.

2. <u>ಅಭಿಯೋಜನೆ ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ-</u>

ದಿನಾಂಕ ೦೬.೧೦.೨೦೨೩ ರಂದು ಚಳ್ಳಕೆರೆ ಪಟ್ಟಣದ ನರಹರಿನಗರದಲ್ಲಿ ಚಾಸಾ.೧ ಮತ್ತು ಚಾಸಾ.೨ ಅವರ ಮನೆಯ ಕಡೆಗೆ ನಡೆದುಕೊಂಡು ಹೋಗುತ್ತಿದ್ದಾಗ, ೧ ರಿಂದ ೫ನೇ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಚಾಸಾ.೧ ಮತ್ತು ೨ ರವರಿಗೆ ಅಡ್ಡಗಟ್ಟಿ ತಡೆದು ನಿಲ್ಲಿಸಿಕೊಂಡು, ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ. ಆರೋಪಿತರೆಲ್ಲರೂ ಸೇರಿಕೊಂಡು ಚಾಸಾ.೧ ರವರಿಗೆ ಕೈಕಾಲುಗಳಿಂದ ಹೊಡೆದಿರುತ್ತಾರೆ. ೧ನೇ ಆರೋಪಿಯು ಅಲ್ಲಿಯೇ ಬಿದ್ದಿದ್ದ ಕೋಲನ್ನು ತೆಗೆದುಕೊಂಡು ಚಾಸಾ.೧ ರವರ ಬಲಕೈಗೆ ಹೊಡೆದಿರುತ್ತಾನೆ. ೨ನೇ ಆರೋಪಿಯು ಚಾಸಾ.೧ ರವರ ತಲೆ ಕೂದಲು ಹಿಡಿದು ಎಳೆದಾಡಿ ಸಾರ್ವಜನಿಕ ಸ್ಥಳದಲ್ಲಿ ಅವಮಾನ

ಮಾಡಿರುತ್ತಾರೆ. ಅಲ್ಲದೆ ಆರೋಪಿತರು ಚಾಸಾ.೧ ರವರಿಗೆ "ಈ ರಸ್ತೆಯಲ್ಲಿ ಇನ್ನೊಂದು ಸಾರಿ ಓಡಾಡಿದರೆ ಪ್ರಾಣ ತೆಗೆಯುತ್ತೇವೆ" ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ ೧೪೩, ೧೪೭, ೧೪೮, ೩೨೩, ೩೨೪, ೩೪೧, ೩೫೪, ೫೦೪, ೫೦೬ ಸಹವಾಚಕ ಕಲಂ ೧೪೯ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆ.

3. ದಿನಾಂಕ: ೦೭.೧೦.೨೦೨೩ ರಂದು ಚಾಸಾ.೧ ರವರು ಚಾಸಾ.೮ ರವರ ಮುಂದೆ ದೂರನ್ನು ನೀಡಿರುತ್ತಾರೆ. ಚಾಸಾ–೮ ರವರು ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ನಂ:೪೫೨/೨೦೨೩ ನ್ನು ದಾಖಲಿಸಿರುತ್ತಾರೆ ಮತ್ತು ಪ್ರಥಮ ವರ್ತಮಾನ ವರದಿಯನ್ನು ಅಧಿಕಾರ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ರವರಿಗೆ ಹಾಗೂ ತಮ್ಮ ಮೇಲಾಧಿಕಾರಿಗಳಿಗೆ ನಿವೇದಿಸಿ ಕೊಂಡಿರುತ್ತಾರೆ. ತನಿಖಾಧಿಕಾರಿಗಳು ಸದರಿ ದೂರಿನ ಅನ್ವಯ ತನಿಖಾ ಕಾರ್ಯ ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ಮೇಲೆ ತಿಳಿಸಿದ ಅಪರಾಧಗಳಿಗೆ ನ್ಯಾಯಿಕ ದೋಷರೋಪಣಾಪಟ್ಟಿ ಸಲ್ಲಿಸಿದ್ದು, ನ್ಯಾಯಾಲಯವು ಭಾ. ದಂ. ಸಂ. ಕಲಂ ೧೪೩, ೧೪೭, ೧೪೮, ೩೨೩, ೩೨೪, ೩೪೧, ೩೫೪, ೫೦೪, ೫೦೬ ಸಹವಾಚಕ ಕಲಂ ೧೪೯ ರಡಿಯಲ್ಲಿ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು.

4. ಆರೋಪಿತರು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಲಯಕ್ಕೆ ಜಾಮೀನು ಅರ್ಜಿ ಸಲ್ಲಿಸಿ, ನ್ಯಾಯಾಲಯದಿಂದ ಜಾಮೀನು ಪಡೆದು ಕೊಂಡಿರುತ್ತಾರೆ. ಭಾ. ದಂ. ಸಂ. ಕಲಂ ೨೦೭ ರಡಿಯಲ್ಲಿ ಆರೋಪಿತರಿಗೆ ದೋಷಾರೋಪಣಾ ಪ್ರತಿ ನೀಡಿದ್ದು, ಆರೋಪಿತರ ಪರ ವಕೀಲರು ಮತ್ತು ಸ.ಸ.ಅ. ರವರ ವಾದವನ್ನು ಆಲಿಸಿದ ನಂತರ ಭಾ. ದಂ. ಸಂ. ಕಲಂ ೧೪೩, ೧೪೭, ೧೪೮, ೩೨೩, ೩೨೪, ೩೪೧, ೩೫೪, ೫೦೪, ೫೦೬ ಸಹವಾಚಕ ಕಲಂ ೧೪೯ ರಡಿಯಲ್ಲಿ ದೋಷಾರೋಪಣೆಯನ್ನು ಸಿದ್ದಪಡಿಸಿ ಆರೋಪಿತರಿಗೆ ಓದಿ ಹೇಳಿದ್ದು, ತಾವು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಕೋರಿ ಕೊಂಡಿರುತ್ತಾರೆ.

5. ಆರೋಪಿತರು ತಮ್ಮ ಮೇಲೆ ಮಾಡಲಾದ ದೋಷಾರೋಪಣೆಯನ್ನು ಅಲ್ಲಗಳೆದಿರುವುದರಿಂದ ಅಭಿಯೋಜನಾ ಪಕ್ಷದವರು ದೋಷಾರೋಪಣಾ ಪಟ್ಟಿಯಲ್ಲಿ

ಹೇಳಿರುವಂತೆ ಪ್ರಕರಣವನ್ನು ನಿರೂಪಿಸಲು ಚಾಸಾ.೧ ಮತ್ತು ೨ ರವರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ಸದರಿ ವಿಚಾರಣೆಯಲ್ಲಿ ಚಾಸಾ.೧ ಮತ್ತು ೨ ರವರು ಅಭಿಯೋಜನೆಯ ಪರ ಸಾಕ್ಷ್ಯ ನುಡಿಯದೇ ಪ್ರಕರಣದಲ್ಲಿನ ಸಾರಾಂಶದ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಸದರಿ ಸಾಕ್ಷ್ಯವನ್ನು ಪ್ರತಿಕೂಲ ಸಾಕ್ಷ್ಯವೆಂದು ಪರಿಗಣಿಸಲ್ಪಟ್ಟಿದ್ದರಿಂದ ಸ.ಸ.ಅ. ರವರು ಉಳಿದ ಅಭಿಯೋಜನ ಪರ ಸಾಕ್ಷ್ಯವನ್ನು ವಿಚಾರಣೆ ಮಾಡಬೇಕೆಂದು ಕೇಳಿದ ಮನವಿಯನ್ನು ತಿರಸ್ಕರಿಸಲಾಯಿತು. ಅಭಿಯೋಜನ ಪರ ಮಂಡಿಸಲಾದ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ತಿರುಳು ಇಲ್ಲದೇ ಇರುವುದರಿಂದ ಭಾ. ದಂ. ಸಂ. ಕಲಂ ೩೧೩ ರಡಿಯಲ್ಲಿ ಆರೋಪಿತರ ಹೇಳಿಕೆ ಏನೂ ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

6. ಉಭಯ ಪಕ್ಷಗಾರರ ವಾದಗಳನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

7. ಅಭಿಯೋಜನ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

(1) ದಿನಾಂಕ ೦೬.೧೧.೨೦೨೩ ರಂದು ರಾತ್ರಿ ೮.೩೦ ಗಂಟೆ ಸಮಯದಲ್ಲಿ ಚಳ್ಳಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಳ್ಳಕೆರೆ ಪಟ್ಟಣದ ನರಹರಿ ನಗರದಲ್ಲಿ ಆರೋಪಿತರು ಗಲಾಟೆ ಮಾಡುವ ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪನ್ನು ಕಟ್ಟಿಕೊಂಡಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೧೪೩ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(2) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಗಲಾಟೆ ಮಾಡಿ ದೊಂಬಿ ಮಾಡಿದ್ದರಿಂದ ಆರೋಪಿತರು ಭಾ. ದಂ. ಸಂ.

ಕಲಂ ೧೪೭ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(3) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಕೈಗಳಲ್ಲಿ ಕೋಲು ಹಿಡಿದುಕೊಂಡು ದೊಂಬಿ ಮಾಡಿ ಬಲಪ್ರದರ್ಶಿಸಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೧೪೮ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(4) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಚಾಸಾ.೧ ಮತ್ತು ಚಾಸಾ.೨ ರವರನ್ನು ಮುಂದಕ್ಕೆ ಹೋಗದಂತೆ ಅಡ್ಡಗಟ್ಟಿ ಅಕ್ರಮವಾಗಿ ತಡೆದು ನಿಲ್ಲಿಸಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೩೪೧ ಸಹವಾಚಕ ಕಲಂ ೧೪೯ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(5) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಚಾಸಾ.೧ ರವರ ಮೇಲೆ ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈಯ್ದು ಅವಮಾನ ಮಾಡಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೫೦೪ ಸಹವಾಚಕ ಕಲಂ ೧೪೯ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(6) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಚಾಸಾ.೧ ರವರ ಮೇಲೆ ಗಲಾಟೆ ಮಾಡಿ, ಸ್ವ ಇಚ್ಛೆಯಿಂದ ಚಾಸಾ.೧ ರವರಿಗೆ ಕೈಕಾಲುಗಳಿಂದ ಹೊಡೆದು ನೋವುಂಟುಪಡಿಸಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೩೨೩ ಸಹವಾಚಕ ಕಲಂ ೧೪೯ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(7) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಚಾಸಾ.೧ ರವರ ಮೇಲೆ ಗಲಾಟೆ ಮಾಡಿ, ೧ನೇ ಆರೋಪಿಯು ಸ್ವ ಇಚ್ಛೆಯಿಂದ ಚಾಸಾ.೧ ರವರಿಗೆ ಕೋಲಿನಿಂದ ಹೊಡೆದು ತೀವ್ರ ಸ್ವರೂಪದ ಗಾಯಪಡಿಸಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೩೨೬ ಸಹವಾಚಕ ಕಲಂ ೧೪೯ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(8) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಚಾಸಾ.೧ ರವರ ಮೇಲೆ ಗಲಾಟೆ ಮಾಡಿ, ೨ನೇ ಆರೋಪಿಯು ಮಹಿಳೆಯಾದ ಚಾಸಾ.೧ ರವರ ಮಾನಕ್ಕೆ ಚ್ಯುತಿಯುಂಟುಪಡಿಸಲು ಸಾರ್ವಜನಿಕ ಸ್ಥಳದಲ್ಲಿ ಚಾಸಾ.೧ ರವರ ತಲೆಕೂದಲನ್ನು ಹಿಡಿದು ಎಳೆದಾಡಿ ಅವಮಾನ ಮಾಡಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೩೫೪ ಸಹವಾಚಕ ಕಲಂ ೧೪೯ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(9) ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಚಾಸಾ.೧ ರವರ ಮೇಲೆ ಗಲಾಟೆ ಮಾಡಿ, "ಇನ್ನೊಂದು ಸಾರಿ ಈ ರಸ್ತೆಯಲ್ಲಿ ಓಡಾಡಿದರೆ ಪ್ರಾಣ ತೆಗೆಯುತ್ತೇವೆ" ಎಂದು ಪ್ರಾಣ ಬೆದರಿಕೆ ಹಾಕಿದ್ದರಿಂದ ಆರೋಪಿತರು ಭಾ. ದಂ. ಸಂ. ಕಲಂ ೫೦೬ ಸಹವಾಚಕ ಕಲಂ ೧೪೯ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಸಾಬೀತುಪಡಿಸಿದ್ದಾರೆಯೇ?

(10) ಯಾವ ಆದೇಶ?

**8.** ಈ ಮೇಲಿನ ಅಂಶಗಳಿಗೆ ನ್ಯಾಯಾಲಯ ಈ ಕೆಳಕಂಡಂತೆ ಉತ್ತರಿಸುತ್ತದೆಃ-

ಅಂಶ ನಂ.1 ಃ ನಕಾರಾತ್ಮಕವಾಗಿ,

ಅಂಶ ನಂ.2 ಃ ನಕಾರಾತ್ಮಕವಾಗಿ,

ಅಂಶ ನಂ.3 ಃ ನಕಾರಾತ್ಮಕವಾಗಿ,

ಅಂಶ ನಂ.4 ಃ ನಕಾರಾತ್ಮಕವಾಗಿ,

ಅಂಶ ನಂ.5 ಃ ನಕಾರಾತ್ಮಕವಾಗಿ,

ಅಂಶ ನಂ.6 ಃ ನಕಾರಾತ್ಮಕವಾಗಿ,

ಅಂಶ ನಂ.7 ಃ ನಕಾರಾತ್ಮಕವಾಗಿ,

ಅಂಶ ನಂ.8 ಃ ನಕಾರಾತ್ಮಕವಾಗಿ,

ಅಂಶ ನಂ.9 ಃ ನಕಾರಾತ್ಮಕವಾಗಿ,

ಅಂಶ ನಂ.10 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

ಕಾರಣಗಳು

9. ಅಂಶ ನಂ.೧ ರಿಂದ ೯ – ಈ ಅಂಶಗಳು ಒಂದನ್ನೊಂದು ಅವಲಂಬಿಸಿದ್ದು, ಇವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದಂತಹ ಚರ್ಚೆ ಹಾಗೂ ವಿಮರ್ಶೆಯ ಅವಶ್ಯಕತೆ ಇದ್ದು, ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ಅಭಿಯೋಜನಾ ಪಕ್ಷದವರು ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು, ದೊಂಬಿ ಮಾಡಿ, ಕೈಗಳಲ್ಲಿ ಕೋಲು ಹಿಡಿದುಕೊಂಡು ಬಲಪ್ರದರ್ಶಿಸಿ, ಚಾಸಾ.೧ ಮತ್ತು ೨ ರವರನ್ನು ಕಾನೂನುಬಹಿರವಾಗಿ ತಡೆದು ನಿಲ್ಲಿಸಿ, ಅವಾಚ್ಯ ಶಬ್ದಗಳಿಂದ ಬೈಯ್ದು, ಕೈಕಾಲುಗಳಿಂದ ಮತ್ತು ಕೋಲಿನಿಂದ ಹೊಡೆದು, ತೀವ್ರ ಸ್ವರೂಪದ ಗಾಯಪಡಿಸಿ, ಚಾಸಾ.೧ ರವರ ಮಾನಕ್ಕೆ ಚ್ಯುತಿಬರುವಂತೆ ನಡೆದುಕೊಂಡು, ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಚಾಸಾ–೧ ರವರು ನೀಡಿದ ದೂರಿನ ಮೇರೆಗೆ ಪ್ರಕರಣವನ್ನು ದಾಖಲಾಸಿಕೊಳ್ಳಲಾಗಿದೆ.

11. ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಮಾಡಲಾದ ಆಪಾದನೆಗಳನ್ನು ನಿರೂಪಿಸಲು ಅಭಿಯೋಜನಾ ಪಕ್ಷದವರು ದೂರು ನೀಡಿದ ಮತ್ತು ನೊಂದ ಸಾಕ್ಷಿಯಾದ ಚಾಸಾ.೧ ರವರನ್ನು ಪ್ರಾಸಾ.೧ ಎಂದು ಮತ್ತು ನೊಂದ ಸಾಕ್ಷಿಯಾದ ಚಾಸಾ.೨ ರವರನ್ನು ಪ್ರಾಸಾ.೨ ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಸದರಿ ಪ್ರಾಸಾ.೧ ಮತ್ತು ೨ ರವರು ಅಭಿಯೋಜನಾ ಪರವಾಗಿ ಸಾಕ್ಷ್ಯ ನುಡಿಯದೆ ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಎಂದಿಗೂ ಅಕ್ರಮ ಗುಂಪು ಕಟ್ಟಿಕೊಂಡು ಬಂದು

ದೊಂಬಿ ಮಾಡಿರುವುದಿಲ್ಲ, ತನಗೆ ಮತ್ತು ಚಾಸಾ.೨ ರವರಿಗೆ ಅಡ್ಡಗಟ್ಟಿ ತಡೆದು ನಿಲ್ಲಿಸಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈಯ್ದಿರುವುದಿಲ್ಲ, ಕೈಕಾಲುಗಳಿಂದ ಹಲ್ಲೆ ಮಾಡಿರುವುದಿಲ್ಲ, ಯಾವುದೇ ವಸ್ತುವಿನಿಂದ ಯಾವುದೇ ಹಲ್ಲೆ ಮಾಡಿರುವುದಿಲ್ಲ, ಮಾನಕ್ಕೆ ಚ್ಯುತಿಯುಂಟಾಗುವಂತೆ ನಡೆದುಕೊಂಡಿರುವುದಿಲ್ಲ, ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಾಸಾ.೧ ರವರು ಪೋಲೀಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ, ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ, ಯಾವುದೇ ವಸ್ತುವನ್ನು ಜಪ್ತುಪಡಿಸಿಕೊಂಡಿರುವುದಿಲ್ಲ, ನಿ.ಪಿ.೧–ದೂರು ಮತ್ತು ನಿ.ಪಿ.೨–ಮಹಜರ್‌ನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಭಿಯೋಜನೆಯವರು ಪ್ರಾಸಾ.೧ ಮತ್ತು ೨ ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

12. ಆರೋಪಿತರ ಮೇಲಿನ ಆರೋಪವನ್ನು ಸಾಬೀತುಪಡಿಸಲು ಅಭಿಯೋಜನೆಯು ಪ್ರಾಸಾ.೧ ಮತ್ತು ೨ ರವರನ್ನು ಸಾಕ್ಷಿಯಾಗಿ ವಿಚಾರಣೆ ಮಾಡಿದ್ದರೂ, ಸದರಿ ಪ್ರಾಸಾ.೧ ಮತ್ತು ೨ ರವರ ಸಾಕ್ಷ್ಯದಲ್ಲಿ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು, ದೊಂಬಿ ಮಾಡಿ ಬಲಪ್ರದರ್ಶಿಸಿರುವುದರ ಬಗ್ಗೆಯಾಗಲೀ, ಪ್ರಾಸಾ.೧ ಮತ್ತು ೨ ರವರಿಗೆ ಅಡ್ಡಗಟ್ಟಿ ತಡೆದು ನಿಲ್ಲಿಸಿರುವ ಬಗ್ಗೆಯಾಗಲೀ, ಅವಾಚ್ಯ ಶಬ್ದಗಳಿಂದ ಬೈಯ್ದಿರುವ ಬಗ್ಗೆಯಾಗಲೀ, ಕೈಕಾಲುಗಳಿಂದ ಅಥವಾ ಕೋಲಿನಿಂದ ಹೊಡೆದ ಬಗ್ಗೆಯಾಗಲೀ, ಮಾನಕ್ಕೆ ಚ್ಯುತಿಯುಂಟಾಗುವಂತೆ ನಡೆದುಕೊಂಡಿರುವ ಬಗ್ಗೆಯಾಗಲೀ, ಪ್ರಾಣ ಬೆದರಿಕೆ ಹಾಕಿರುವ ಬಗ್ಗೆಯಾಗಲೀ ಕಂಡು ಬಂದಿರುವುದಿಲ್ಲ.

13. ಪ್ರಾಸಾ.೧ ಮತ್ತು ೨ ರವರನ್ನು ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸಾವಾಲಿಗೊಳಪಡಿಸಿದಾಗಿಯೂ ಸಹ ಪ್ರಾಸಾ.೧ ಮತ್ತು ೨ ರವರು ಆರೋಪಿತರ ವಿರುದ್ಧ ದೋಷಾರೋಪಣೆಯಲ್ಲಿ ಹೇಳಿದಂತೆ ನುಡಿಯಲು ವಿಫಲರಾಗಿರುತ್ತಾರೆ. ಹಾಗಾಗಿ ಪ್ರಾಸಾ.೧

ಮತ್ತು ೨ ರವರ ಸಾಕ್ಷ್ಯ ಅಭಿಯೋಜನಾ ಪಕ್ಷಕ್ಕೆ ಆರೋಪಿತರ ವಿರುದ್ಧ ಆರೋಪಗಳನ್ನು ಸಿದ್ಧಪಡಿಸಲು ಸಹಕಾರಿಯಾಗಿರುವುದಿಲ್ಲ.

14. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ತನಗೆ ಗಾಯವನ್ನುಂಟು ಮಾಡಿದಂತಹ ಅಥವಾ ತೊಂದರೆಯನ್ನು ಮಾಡಿದಂತಹ ವ್ಯಕ್ತಿಯ ಪರವಾಗಿ ಸಾಕ್ಷ್ಯವನ್ನು ನುಡಿಯುವುದಿಲ್ಲ. ಆದರೆ ಈ ಪ್ರಕರಣದಲ್ಲಿ ಪ್ರಾಸಾ.೧ ಮತ್ತು ೨ ರವರು ತಮ್ಮ ಸಾಕ್ಷ್ಯದಲ್ಲಿ ದೋಷಾರೋಪಣೆಯ ವಿರುದ್ಧವಾಗಿ ಹಾಗೂ ಆರೋಪಿತರ ಪರವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಪ್ರಾಸಾ.೧ ಮತ್ತು ೨ ರವರು ತಮ್ಮ ಹೇಳಿಕೆಯ ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿದ್ದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಬೇಕೆಂಬ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಳ್ಳಿಹಾಕಲಾಗಿರುತ್ತದೆ. ಈ ಪ್ರಕರಣದಲ್ಲಿ, ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿರುವಂತಹ ಯಾವುದೇ ಅಪರಾಧ ಮಾಡಿರುವುದು ಕಂಡು ಬರುವುದಿಲ್ಲ. ಈ ಪ್ರಕರಣದಲ್ಲಿ ಲಭ್ಯವಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಪರಿಗಣಿಸಿದಾಗ ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ಧ ಮಾಡಲಾದ ದೋಷಾರೋಪಣೆಯನ್ನು ಸಂಶಯಾತೀತವಾಗಿ ಸಿದ್ಧಪಡಿಸಲು ವಿಫಲರಾಗಿರುತ್ತಾರೆ. ಅಪರಾಧಿಕ ತತ್ವಗಳ ಪ್ರಕಾರ ಅಪರಾಧಿಕ ಪ್ರಕರಣಗಳಲ್ಲಿ ಅಭಿಯೋಜನೆಯ ಪ್ರಕರಣಗಳ ಮೇಲೆ ಸಂಶಯ ಉದ್ಭವಿಸಿದರೆ ಸದರಿ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಬೇಕೆಂದು ಇರುತ್ತದೆ. ಈ ಕಾರಣಗಳಿಂದಾಗಿ ಅಂಶ ೧ ರಿಂದ ೯ ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

15. ಅಂಶ ನಂ.೧೦– ಮೇಲೆ ಮಾಡಲಾದ ವಿವರವಾದ ಚರ್ಚೆ ಹಾಗೂ ಕಾರಣಗಳಿಂದ ಈ ಕೆಳಕಂಡಂತೆ ನ್ಯಾಯಾಲಯವು ಆದೇಶ ಮಾಡಿರುತ್ತದೆ:–

**ಆ ದೇ ಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ ೨೪೮(೧) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ ೧೪೩, ೧೪೭, ೧೪೮, ೩೨೩, ೩೨೬, ೩೪೧, ೩೫೪, ೫೦೪, ೫೦೬ ಸಹವಾಚಕ ಕಲಂ ೧೪೯ ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ ೪೩೭(ಎ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯು ೬ ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು ಎಂದು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಸ್ವತ್ತು ಪಟ್ಟಿ ಸಂಖ್ಯೆ ೨೭೧/೨೦೨೩ ರೀತ್ಯಾ ಅಮಾನತ್ತುಪಡಿಸಿಕೊಂಡಿರುವ ಒಂದು ಕೋಲು ಮೌಲ್ಯರಹಿತವಾಗಿದ್ದು, ಮೇಲ್ಮನವಿ ಅವದಿ ಮುಗಿದ ನಂತರ ಅದನ್ನು ನಾಶಪಡಿಸಲು ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚುಪಡಿಸಿದ ನಂತರ, ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ ದಿನಾಂಕಃ 02 ನೇ ಏಪ್ರಿಲ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಹೇಮಾ ಹೆಚ್.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.

## ಅನುಬಂಧ

1) ಅಭಿಯೋಜನಾ ಪಕ್ಷದ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ಃ–

| | | |
|---|---|---|
| ಪ್ರಾಸಾ–೧ | : | ಯಶೋಧಮ್ಮ |
| ಪ್ರಾಸಾ–೨ | : | ನಾಗರಾಜ |

2) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ದಾಖಲಾತಿಗಳುಃ–

| | | |
|---|---|---|
| ನಿಪಿ.೧ | : | ದೂರು. |
| ನಿಪಿ.೧(ಎ) | : | ಸಾಕ್ಷಿಯ ಹೆಬ್ಬೆಟ್ಟಿನ ಗುರುತು |
| ನಿಪಿ.೨ | : | ಸ್ಥಳ ಪಂಚನಾಮೆ |
| ನಿಪಿ.೨(ಎ) | : | ಸಾಕ್ಷಿಯ ಹೆಬ್ಬೆಟ್ಟಿನ ಗುರುತು |
| ನಿಪಿ.೩ | : | ಸಾಕ್ಷಿ ಹೇಳಿಕೆ |

3) ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾದ ಮುದ್ದೆಮಾಲುಃ

–ಃ ಇಲ್ಲಾ ಃ–

4) ಆರೋಪಿ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ಗುರುತಿಸಲಾಗಿದ ದಾಖಲಾತಿಗಳ

–ಃ ಇಲ್ಲಾ ಃ–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಯವರು, ಚಳ್ಳಕೆರೆ.